## . ಸ,. ಶಿ, ಅಕ್ಷರದ ವಚನದ ಅರ್ಥ

**1) ಶಿವಭಕ್ತರ ರೋಮನೊಂದರೆ  ಶಿವನು ನೋವನು ನೋಡಾ**
**ಶಿವಭಕ್ತರು ಪರಿಣಾಮಿಸಿದರೆ ಶಿವನು ಪರಿಣಾಮಿಸುವನು ನೋಡಾ.**
**ಭಕ್ತದೇಹಿಕದೇವನೆಂದು ಶ್ರುತಿ ಹೊಗಳುವ ಕಾರಣ ಶಿವಭಕ್ತರ ಲೇಸು ಹೊಲ್ಲೆಹ ಶಿವನ ಮುಟ್ಟುವುದು ನೋಡಾ.**
**ತಾಯಿನೊಂದಡೆ ಒಡಲಶಿಶು ನೋವತೆರನಂತೆ, ಭಕ್ತರುನೊಂದಡೆ ತಾ ನೋವನು ನೋಡಾ ಚೆನ್ನಮಲ್ಲಿಕಾರ್ಜುನಾ.**

### ಪದಗಳ ಅರ್ಥ

**ಪರಿಣಾಮ-ಸಂತೋಷ,**
**ಭಕ್ತದೇಹಿಕದೇವ-ಭಕ್ತರು ತನ್ನ ಪ್ರಾಣವಾಗಿರುವ ದೇವರು.**
**ಶ್ರುತಿ-ವೇದ,ಕಿವಿಯಿಂದ ಕೇಳುವ, ಲೇಸು-ಒಳ್ಳೆಯದು,**
**ಹೊಲ್ಲೆಹ-ಕೆಟ್ಟದ್ದು.**

### ವಚನದ ಅರ್ಥ

**ಶಿವಭಕ್ತರ ರೋಮನೊಂದರೆ ಒಡನೆ ಶಿವನು ನೋಡಾ. ಶಿವಭಕ್ತರು ಪರಿಣಾಮಿಸಿದರೆ ಶಿವನು ಪರಿಣಾಮಿಸುವನು ನೋಡಾ. ಶಿವಭಕ್ತರ ಕೂದಲಿಗೆ ತುಸುನೋವಾದದರೂ ಶಿವನಿಗೆ ಕೂಡಲೆ ನೋವಾಗುತ್ತದೆ. ಶಿವಭಕ್ತರು ಆನಂದಿಸಿದರೆ ಶಿವನು ಆನಂದಿಸುತ್ತಾನೆ. ಪರಮಾತ್ಮನು ಭಕ್ತರೆ ಪ್ರಾಣವಾಗಿರುವನು ಭಕ್ತದೇಹಿಕದೇವನೆಂದು ಶ್ರುತಿ ಹೋಗಳುವ ಕಾರಣ ಶಿವ ಭಕ್ತರ ಲೇಸು ಹೊಲ್ಲೆಹ ಶಿವನ ಮುಟ್ಟುವುದು" ನೋಡಾ. ಶಿವನು ಭಕ್ತರೆ ಪ್ರಾಣವಾಗಿರುವನು. ಎಂದು ಶ್ರುತಿಗಳು ಹೇಳುತ್ತವೆ. ಶಿವಭಕ್ತರ ಒಳ್ಳೆಯದು ಕೆಟ್ಟದು ಶಿವನನ್ನು ಮುಟ್ಟುತ್ತವೆ. ತಾಯಿ ನೊಂದರೆ ಒಡಲ ಶಿಶು ನೋವ ತೆರನಂತೆ ಭಕ್ತರು ನೊಂದರೆ ತಾ ನೋವನು ನೋಡಾ. ಗರ್ಭಿಣಿತಾಯಿಗೆ ನೋವಾದರೆ ಅದು ಒಡಲಿನ ಶಿಶುವಿಗೂ ನೋವಾಗುವಂತೆ ಭಕ್ತರ ನೋವು, ನಲಿವು ಪರಮಾತ್ಮನಿಗೂ ಮುಟ್ಟುತ್ತವೆ. ದೇವ ಭಕ್ತ ಸಂಬಂಧವನ್ನು ಈವಚನ ಹೇಳುತದೆ. ದೇವರೇ ಪ್ರಾಣವಾಗಿಭಕ್ತನಿದ್ದರೆ, ಭಕ್ತರೇ ಪ್ರಾಣವಾಗಿ ದೇವನಿದ್ದಾನೆ. ಶಿವಭಕ್ತರು**

ನೊಂದರೂ,ಆನಂದಿಸಿದರೂಅವು ಶಿವನಿಗೆ ಮುಟ್ಟುತ್ತವೆ. ಭಕ್ತರೇ ಪ್ರಾಣವಾಗಿ ಶಿವನಿದ್ದಾನೆ. ಶ್ರುತಿ ಹೇಳುತ್ತಿವೆ. ಶಿವಭಕ್ತರ ಒಳಿತು, ಕೆಡುಕುಗಳು ಶಿವನನ್ನು ಮುಟ್ಟುತ್ತವೆ. ತಾಯಿ ದುಃಖಿಸಿದರೆ ಒಡಲ ಶಿಶುವಿಗೂ ದುಃಖವಾಗುತ್ತದೆ. ಭಕ್ತರು ಕಣ್ಣೀರು ಹಾಕಿದರೆ, ಕೂಡಲೆ ಶಿವನೂ ಮಿಡಿಯುತ್ತಾನೆ. ನಾವು ಹೆದರಬೇಕಾಗಿಲ್ಲ.. ನಮ್ಮನ್ನು ರಕ್ಷಿಸುವ ದೇವನಿದ್ದಾನೆ. ನಾವು ಅವನಲ್ಲಿ ಶರಣಾಗಬೇಕು.

2)ಶಿವಶರಣರ ಮನೆಯಂಗಳ ವಾರಣಾಸಿ ಎಂಬುದು ಹುಸಿಯೆ?
ಪುರಾತನರ ಮನೆಯಂಗಳದಲ್ಲಿ ಅಷ್ಟಾ ಷಷ್ಟಿ ತೀರ್ಥಂಗಳು ನೆಲೆಸಿಪ್ಪವಾಗಿ.
ಅದೆಂತೆಂದಡೆ ಅದಕ್ಕೆ ಆಗಮ ಸಾಕ್ಷಿ
ಕೇದಾರಸ್ಯೋದಕೆ ಪೀತೇ ವಾರಣಾಸ್ಯಾ ಮೃತೇ ಸತೀ'
ಶ್ರೀಶೈಲ ಶಿಖರೇ ದೃಷ್ಟೇ ಪುನರ್ಜನ್ಮ ನ ವಿದ್ಯತೆ||ಅಳ ಎಂಬ ಶಬ್ದಕ್ಕಧಿಕವು.
ಸುತ್ತಿಬರಲು ಶ್ರೀಶೈಲ, ಕೆಲಬಲದಲ್ಲಿ ಕೇದಾರ. ಅಲ್ಲಿಂದ ಹೊರಗೆ ವಾರಣಾಸಿ.
ವಿರಕ್ತಿ ಬೆದೆಯಾಗಿ, ಭಕ್ತಿ ಮೊಳೆಯಾಗಿ ಎನ್ನ ದೇವ ಚೆನ್ನಮಲ್ಲಿಕಾರ್ಜುನಾ
ನಿಮ್ಮ ಭಕ್ತರ ಮನೆಯಂಗಳ ಪ್ರಯಾಗದಿಂದ. ಗುರುಗಂಜಿಯಧಿಕ ನೋಡಾ.

## ಪದಗಳ ಅರ್ಥ

ವಾರಣಾಸಿ--ಕಾಶಿ ಬನಾರಸ್
ಅಷ್ಟಾಷಷ್ಟಿ-16. ತೀರ್ಥ-ಕ್ಷೇತ್ರ, ಪವಿತ್ರಜಲ,
ಉದಕ-ನೀರು,ತೀರ್ಥ,ಗಂಗಾನದಿ ನೀರು. ಪೀತೆ-ಕುಡಿದರೆ,
ಮೃತೆ-ತೀರಿಕೊಂಡರೆ,
ದೃಷ್ಟಿ-ನೋಡಿದರೆ,
ಪುನರ್ಜನ್ಮ-ಮರುಹುಟ್ಟು,
ನ ವಿದ್ಯತೆ-ಬರುವುದಿಲ್ಲ.

## ವಚನದ ಅರ್ಥ

ಈ ವಚನದಲ್ಲಿ ಶರಣರ ಶ್ರೇಷ್ಠತೆಯನ್ನು ಪುಣ್ಯಕ್ಷೇತ್ರ ದರ್ಶನಕ್ಕಿಂತ ಅಧಿಕ ಎಂದು ಆಗಮವನ್ನು ಉದಾಹರಿಸಿ ಖಂಡಿಸಿ ಹೇಳಿದ್ದಾರೆ. ಜಡತೀರ್ಥ ಕ್ಷೇತ್ರ ಗಳಿಗಿಂತಲೂ
ಶರಣರ ದರ್ಶನವೆ ಅಧಿಕ.ಎಂದು ಪ್ರತಿಪಾದಿಸಿದ್ದಾರೆ. ಶಿವಶರಣರ ಮನೆಯಂಗಳ ವಾರಣಾಸಿಗಿಂತ ಅಧಿಕ?ಶಿವಶರಣರ ಮನೆಯೆ ಕಾಶಿಯೆಂಬುದು ಸುಳ್ಳೆ? ಪುರಾತನರ ಮನೆಯಂಳದಲ್ಲಿ 16 ಪುಣ್ಯನದಿಗಳು ನೆಲೆಸಿವೆ .ಹೇಗೆಂದರೆ, ಆಗಮ ಏನು ಹೇಳುತ್ತದೆ. ಕೇದಾರದಲ್ಲಿ ಗಂಗಾನದಿ ನೀರು ಕುಡಿದರೆ,ವಾಣಾಸಿಯಲ್ಲಿ ಕಾಲವಾದರೆ, ಶ್ರೀಶೈಲದ ಶಿಖರವನ್ನು ನೋಡಿದರೆ, ಅವರಿಗೆ ಮತ್ತೆ ಜನನವಿಲ್ಲ. ಎಂದು ಹೇಳಲಾಗುತ್ತಿದೆ. ಈ ಮಾತಿಗಿಂತಲೂ ಅಧಿಕ ಶರಣರ ದರ್ಶನ. ಶರಣರ ಅಕ್ಕಪಕ್ಕ ದಲ್ಲಿಕೇದಾರ, ಗಂಗಾನದಿ ಇವೆ. ಅವರನ್ನು ಒಂದು ಪ್ರದಕ್ಷಣೆ ಹಾಕಿದರೆ, ಶ್ರೀಶೈಲ ಶಿಖರವನ್ನು ದರ್ಶನ ಮಾಡಿದಂತೆ. ಅವರಹೊರಗೆ ಇರುವುದೆ ಕಾಶಿ.ಪುಣ್ಯನದಿಗಳು ಹೊರಗಿನ ಭೌತಿಕ ದೇಹವನ್ನು ಶುದ್ಧಮಾಡಿಯಾವು. ಆದರೆ ಮನವನ್ನಾಗಲಿ ಅಂತರಂಗವನ್ನಾಗಲಿ, ಅಂತಃಕರಣಗಳನ್ನಾಗಲಿಶುದ್ಧ ಮಾಡಲಾರವು. ಶರಣರು ತಮ್ಮತಪಸ್ಸಿನಿಂದ, ಜ್ಞಾನದಿಂದ ನಮ್ಮ ಅಂತರಂಗವನ್ನೂ ಪರಿಶುದ್ಧಿ ಮಾಡುತ್ತಾರೆ. ಅವರು ನೀಡುವ ಅರಿವಿನ ಬೆಳಕಿನಿಂದ ನಮ್ಮ ಮನದ, ಜನ್ಮದ ಕತ್ತಲುಹೋಗಿ ಬಿಡುತ್ತವೆ. ಅವರಲ್ಲಿ ಭಕ್ತಿಯ ಮಳೆ ಸುರಿದು, ವೈರಾಗ್ಯದ ಬೆಳೆ ಬೆಳೆದು ಪರಮಾತ್ಮನೆ ಸಾಕಾರ ರೂಪಾಗಿ ಬಂದಂತೆ ದರ್ಶನ ಕೊಡುತ್ತಾರೆ. ನಮ್ಮ ಜನ್ಮ ಜನ್ಮದ ಪಾಪಗಳನ್ನು ಸುಟ್ಟು ಬಿಡುತ್ತಾರೆ. ನಮ್ಮ ಆಶೆಗಳನ್ನು ನಾಶಮಾಡಿ ಆನಂದ ಮಯಗೊಳಿಸುತ್ತಾರೆ. ಇದು ಮಹಾತ್ಮರ ಶ್ರೇಷ್ಠತೆ. ಅವರ ಜ್ಞಾನೋಪದೇಶಕ್ಕಿಂತಲೂ ಅಧಿಕವಾದುದು ಇನ್ನೊಂದು ಇಲ್ಲ.

3) ಶಿವಂಗೆ ತಪ್ಪಿದ ಕಾಲ ಭಂಗವಾದುದನರಿಯಾ.
ಶಿವಂಗೆ ತಪ್ಪಿದ ಕಾಮ ಭಸ್ಮವಾದುದನರಿಯಾ.
ಶಿವಂಗೆ ತಪ್ಪಿದ ಬ್ರಹ್ಮನ ಶಿರ ಹೋದುದನರಿಯಾ.
ಚೆನ್ನಮಲ್ಲಿಕಾರ್ಜುನನ ಪಾದಕ್ಕೆ ತಪ್ಪಿದರೆ ಭವಘೋರ
ನರಕವೆಂದರಿಯಾ ಮರುಳೆ.

ಪದಗಳ ಅರ್ಥ

ತಪ್ಪು-ದೂರ, ವಿರುದ್ಧ,
ಕಾಲ-ಯಮ, ಮೃತ್ಯು,
ಕಾಮ-ಮನ್ಮಥ,
ಬ್ರಹ್ಮ-ತ್ರಿಮೂ ರ್ತಿಗಳಲ್ಲಿ ಒಬ್ಬ. ಚತುರ್ಮುಖ,
ಭವ-ಹುಟ್ಟು, ಸಾವು
ಘೋರ-ಭಯಂಕರ,
ನರಕ-ದುಃಖ,
ಮರುಳೆ-ಹುಚ್ಚ.

## ವಚನದ

ಶಿವಂಗೆ ತಪ್ಪಿದ ಕಾಲ ಭಸ್ಮವಾದುದನರಿಯಾ. ಶಿವಂಗೆ ತಪ್ಪಿದ ಕಾಮನನು ರುಹಿದುದನರಿಯಾ.ಕಾಲ ಎಂದರೆ ಪುರಾಣದ ಪ್ರಕಾರ ಯಮಧರ್ಮರಾಜ. ನರಕದ ದೇವತೆ. ಶಿವಭಕ್ತನಾದ ಮಾರ್ಕಂಡೇಯನನ್ನು ಆಯುಷ್ಯಮುಗಿದ ಕಾರಣ ಕರೆದುಕೊಂಡುಹೋಗಲು ಯಮಧರ್ಮರಾಜ ಬಂದನು. ಆದರೆ ಮಾರ್ಕಂಡೇಯನು ಶಿವನಿಗೆ ಮೊರೆಯಿಟ್ಟನು. ಕೂಡಲೆ ಶಿವನು ಅನುಗ್ರಹಿಸಿದನು, ಮೃತ್ಯು ಪಾಶಹಾಕಿದ ಯಮನನ್ನು ತ್ರಿಶೂಲದಿಂದ ಶಿರಃಛೇದನ ಮಾಡಿದನು. ಮುಂದೆ ಯಮನಿಗೂ ಅನುಗ್ರಹಿಸಿದನು.ಶಿವಂಗೆ ತಪ್ಪಿದ ಕಾಮನನುರುಹಿದುದನರಿಯಾ. ಕಾಮ ಶಿವನು ತಪಸ್ಸಿನಲ್ಲಿದ್ದಾಗ ಕೆಡಿಸಲುಹೋದನು. ಶಿವನು ಕಾಮನನ್ನು ಸುಟ್ಟನು. ಶಿವಂಗೆ ತಪ್ಪಿದ ಬ್ರಹ್ಮನ ಶಿರಹೋದುದನರಿಯಾ. ಬ್ರಹ್ಮನು ಸುಳ್ಳು ಹೇಳಿ ದುದರಿಂದ ತನ್ನ ಶಿರವನ್ನೆ ಕಳೆದುಕೊಂಡನು. ಚೆನ್ನಮಲ್ಲಿಕಾರ್ಜುನನ ಪಾದಕ್ಕೆ ತಪ್ಪಿದಡೆ ಭವಘೋರ ನರಕವೆಂದರಿಯಾ ಮರುಳೆ.ಪರಮಾತ್ಮ ಚೆನ್ನಮಲ್ಲಿಕಾರ್ಜುನನಿಗೆ ವಿರುದ್ಧವಾಗಿಹೋದರೆ ಭವ ಘೋರ ತಪ್ಪಿದ್ದಲ್ಲ. ಅಕ್ಕನವರು ಪುರಾಣ, ಕಾವ್ಯ ಧರ್ಮವಿಚಾರಗಳನ್ನೋದಿತಿಳಿದುಕೊಂಡಿರುವ ವಿದ್ವಾಂಸರೆ ಸರಿ. ಈವಚನದಲ್ಲಿ ಪುರಾಣದ ಕಥೆಗಳನ್ನು ಬದುಕಿಗೆ ವ್ಯಾಖ್ಯಾನಿಸುತ್ತಿದ್ದಾರೆ. ಪುರಾಣಕಥೆಗಳನ್ನು ಉಲ್ಲೇಖಿಸಿ ಕಾಲ ಕಾಮ, ಬ್ರಹ್ಮ ಇವರು ತಮ್ಮ ಅವಿವೇಕದ ವರ್ತನೆಯಿಂದ ಭಂಗಿತರಾದರು ಎಂಬ ಉದಾಹರಣೆ ನೀಡಿದ್ದಾರೆ. ಪುರಾಣದ ಕಥೆಗಳು ಇಂತಹ ವ್ಯಾಖ್ಯಾನಗಳಿಂದ ಹೊಸ ಅರ್ಥ ಪಡೆದವು. ಇಂತಹ ಶಿಕ್ಷೆಯ ಕತೆಗಳು ಉದ್ದಂಡ ವರ್ತನೆಯವರಿಗೆ ವಿವೇಕ, ಎಚ್ಚರ ಹೇಳುತ್ತವೆ. ಶಿವಂಗೆ ತಪ್ಪಿದ ಕಾಲ ಭಂಗ ವಾದು ದನರಿಯಾ. ಶಿವಪುರಾಣಗಳ

ಪ್ರಕಾರ ಶಿವನೆ ಜಗನ್ನಿಯಾಮಕ.ಕಾಲ,ಕಾಮ,ಬ್ರ ಹ್ಮರಿಗೆ ಆಯಾ ಕಾರ್ಯ ಬಾಹುಳ್ಯ ನೀಡಿದವನು ಶಿವ. ಅವರಿಗೊಂದು ಪದವಿ ಸ್ಥಾನ ನೀಡಿದವನೂ ಶಿವನೆ . ತನ್ನ ಭಕ್ತರ ವಿಚಾರದಲ್ಲಿ ಪ್ರವೇಶಮಾಡಕೂಡದು. ಅವರ ಸುಖ ದುಃಖ ನನ್ನದು.ಎಂದು ಅಪ್ಪಣೆ ಮಾಡಿದ್ದರೂ ಗೆರೆ ದಾಟಿ, ಉಲ್ಲಂಘಿಸಿ ತನ್ನ ಭಕ್ತರಿಗೆ ಉಪದ್ರವ ನೀಡಿದುದರಿಂದ ಕಾಲ,ಕಾಮ,ಬ್ರಹ್ಮರು ದಂಡನೆಗೊಳಗುದರು. ಮಾರ್ಕಂಡೇಯನು ಹದಿನಾರು ವರ್ಷದ ಅಲ್ಪಾಯುಷಿ. ಆದರೆ ಶ್ರೇಷ್ಠ ನಾದ ಶಿವ ಭಕ್ತ. ಶಿವಭಕ್ತನೆಂಬುದನ್ನು ಮರೆತು, ಅಲ್ಪಾಯುಷಿಯೆಂಬುದನ್ನು ನೆಪಮಾಡಿಕೊಂಡು ಯಮನೆ ಬಂದು ಪಾಶ ಹಾಕಿದನು. ಫಲವಾಗಿ ಶಿವನಿಂದ ಯಮನ ಶಿರಃಛೇದನವಾಯಿತು. ದೇವತೆಗಳ ಪ್ರಾರ್ಥನೆಯಂತೆ ಯಮನಿಗೆ ಜೀವ ದಾನ ಮಾಡಲಾಯಿತು. ಮಾರ್ಕಂಡೇಯನು ಚಿರಂಜೀವಿಯಾದನು. ಶಿವಂಗೆ ತಪ್ಪಿದ ಕಾಮ ಭಸ್ಮವಾದುದನರಿಯಾ. ಶಿವನು ತಪಸ್ಸಿನಲ್ಲಿದ್ದಾಗ ಕಾಮ, ಶಿವನ ತಪಸ್ಸು ಕೆಡಿಸಿದನು. ಫಲವಾಗಿ ಭಸ್ಮವಾದನು. ಇದೆ ಗಿರಿಜಾಪುರಾಣಕ್ಕೆ ಉಗಮವಾಯಿತು. ಶಿವಂಗೆ ತಪ್ಪಿದ ಬ್ರಹ್ಮನ ಶಿರ ಹೋದುದನರಿಯಾ. ಚತುರ್ಮುಖ ಬ್ರಹ್ಮನು ಶಿವನ ಇದಿರೆ ತಾನು ಪರಮಾತ್ಮನ ಮುಕುಟ ನೋಡಿ ಬಂದೆನೆಂದು ಸುಳ್ಳು ಹೇಳಿದನು .ಫಲವಾಗಿ ಸುಳ್ಳು ಹೇಳಿದ ಮುಖವನ್ನೆ ಕಳೆದು ಕೊಂಡ ಶಿಕ್ಷೆಗೊಳಗಾದನು. ಪುರಾಣಗಳು ಇಷ್ಟೆಲ್ಲ ಕಥೆಹೇಳುತ್ತವೆ .ಚೆನ್ನಮಲ್ಲಿಕಾರ್ಜುನನ ಪಾದಕ್ಕೆ ತಪ್ಪಿದರೆ ಭವ ಘೋರ ನರಕವೆಂದರಿಯಾ ಮರುಳೆ. ಗೊತ್ತಿದ್ದೂ ಗೊತ್ತಿದ್ದೂ ತಪ್ಪು ಮಾಡಹೊರಟಿರುವ. ಕೌಶಿಕ ರಾಜನಿಗೆ ಹೇಳಿದ ವಚನವಿದು. ಅಕ್ಕನವರಿಗೆ ಪರಮಾತ್ಮ ಬೇಕು. ಈ ರಾಜನಿಗೆ ಭೋಗ ಬೇಕು. ಬೇಕಿದ್ದರೆ ಅಂತಹ ಲೌಕಿಕರಲ್ಲಿ ಆ ಭೋಗ ಪಡೆದುಕೊಳ್ಳಲಿ.

4)ಸೆಜ್ಜೆ ಉಪ್ಪರಿಸಿ ಶಿವಲಿಂಗ ಕರಸ್ಥಲಕ್ಕೆ ಬರೆಲು, ಪ್ರಜ್ವಲಿಸಿ
ತೊಳತೊಳಗಿ ಬೆಳಗುತ್ತಿಹ ಕಾಂತಿಯೊಳು
ಪ್ರಜ್ವಲಿಸಿ, ದೃಷ್ಟಿ ಒಜ್ವರಿಸಿ ಸುರಿವ ಅಶ್ರುಜಲ
ಶಿವಸುಖ ಸಾರಾಯನಲ್ಲಿ ಸಜ್ಜನಸತಿಯ
ರತಿಯೊಡಗೂಡಿ ಲಜ್ಜೆಗೆಟ್ಟು ನಿಮ್ಮ ನೆರೆದೆನು
ಚೆನ್ನಮಲ್ಲಿಕಾರ್ಜುನಾ.

ಪದಗಳ ಅರ್ಥ

ಸೆಜ್ಜೆ-ಕರಡಿಗೆ ಅಥವಾ ಲಿಂಗವಸ್ತ್ರ
ಉಪ್ಪರಿಸಿ- ಏಳಿಸಿ, ಬಿಚ್ಚಿ, ಕರಸ್ಥಲಕ್ಕೆ ತಂದು.
ಜಜ್ಜರಿಸಿ-ಕರಗಿ, ಉತ್ಸಾಹಹೆಚ್ಚಿನೆರೆವೆ-ಸಮಾಧಿಸುಖಪಡೆವೆ.

## ವಚನದ ಅರ್ಥ

ಸೆಜ್ಜೆ ಉಪ್ಪರಿಸಿ ಶಿವಲಿಂಗ ಕರಸ್ಥಲಕ್ಕೆ ಬರೆ ಪ್ರಜ್ವಲಿಸಿ ತೊಳತೊಳಗಿ ಬೆಳಗುತ್ತಿಹ ಕಾಂತಿಯಲ್ಲಿ. ಇಷ್ಟಲಿಂಗವನ್ನು ಕೊರಳಿನಿಂದ ತೆಗೆದು ಕರಸ್ಥಲಕ್ಕೆ ತಂದಾಗ, ಆ ಲಿಂಗ ಪ್ರಕಾಶದ ಬೆಳಗು ನನ್ನ ಆವರಿಸಿತು. ಜಜ್ಜರಿಸಿ ತನುಮನ ದೃಷ್ಟಿನಟ್ಟು ಲಿಂಗದಲ್ಲಿ ಜಜ್ಜ ರಿಸುವ ಶಿವ ಸುಖದಲೋಲಾಡುತ್ತ ನನ್ನ ತನುಮನಗಳು ಪುಳಕಗೊಂಡವು. ಪೂಜೆಗೆ ಉತ್ಸಾಹ ಹೆಚ್ಚಿತು.ನನ್ನ ಕಣ್ಣುಗಳು ಲಿಂಗ ನೋಟದಲ್ಲಿ ಲೀನವಾದವು. ಲಿಂಗಾನಂದದ ಪರಮಸುಖಕ್ಕಾಗಿ ಪೂಜಾನಂದದಲ್ಲಿ ತೊಡಗಿದೆ. ಸಜ್ಜನ ಸದ್ ಭಕ್ತಿರತಿಯಲಿ ನಿಮ್ಮನೆಂದಿಗೆ ನೆರೆವೆ ಚೆನ್ನಮಲ್ಲಿಕಾರ್ಜುನ. ಪರಮಾತ್ಮ ಚೆನ್ನಮಲ್ಲಿಕಾರ್ಜುನನೆ ನಾನು ನಿಮ್ಮ ಸಮಾಧಿಸುಖದಲ್ಲಿ ಎಂದಿಗೆ ರತಳಾಗುವೆ.

5) ಸಂಸಾರ ಸಂಗದಲ್ಲಿ ಬಿದ್ದೆ ನೋಡಾ ನಾನು. ಸಂಸಾರ
ನಿಸ್ಸಾರವೆಂದು ತೋರಿದನೆನಗೆ ಶ್ರೀಗುರು
ಅಂಗವಿಕಾರದ ಸಂಗವ ನಿಲಿಸಿ,
ಲಿಂಗವನಂಗದ ಮೇಲೆ ಸ್ಥಾಪ್ಯವ ಮಾಡಿದನೆನನ್ನ ಗುರು
ಹಿಂದಣ ಜನ್ಮವ ತೊಡೆದು,ಮುಂದಣ ಪಥವತೋರಿದನೆನ್ನ ತಂದೆ .
ಚೆನ್ನಮಲ್ಲಿಕಾರ್ಜುನನ ನಿಜವ ತೋರಿದನೆನನ್ನಗುರು.

## ಪದಗಳ ಅರ್ಥ

ಬಿದ್ದೆ- ಕೆಡವಲಾಯಿತು.
ನಿಸ್ಸಾರ- ಸಾರವಿಲ್ಲದ್ದು.
ಸ್ಥಾಪ್ಯ-ಸ್ಥಾಪಿಸಿದ.

## ವಚನದ ಅರ್ಥ

ಸಂಸಾರ ಸಂಗದಲ್ಲಿ ಬಿದ್ದ ನೋಡಾ ನಾನು ಸಂಸಾರ ನಿಸ್ಸಾರವೆಂದು ತೋರಿ ದನೆನಗೆ ಶ್ರೀಗುರು. ನಾನು ಈ ಸಂಸಾರದಲ್ಲಿ ಬಿದ್ದು ಬಿಟ್ಟೆ. ಈ ಸಂಸಾರವು ಅರ್ಥ ವಿಲ್ಲದ್ದು ಎಂದು ಶ್ರೀ ಗುರುಗಳು ತಿಳಿಸಿಕೊಟ್ಟರು. ಅಂಗವಿಕಾರದ ಸಂಗವ ನಿಲಿಸಿ ಲಿಂಗವನಂಗದ ಮೇಲೆಸ್ಥಾಪ್ಯವ ಮಾಡಿದನೆನ್ನ ಗುರು. ದೇಹವು ವಿಕಾರಗಳಿಗೆ
ಒಳಗಾಗುತ್ತದೆ. ಇದನ್ನು ನಿವಾರಿಸಲು ಶ್ರೀ ಗುರುಗಳು ಲಿಂಗದೀಕ್ಷೆ ನೀಡಿದರು. ಹಿಂದಣ ಜನ್ಮ ತೊಡೆದು ಮುಂದಣ ಪಥವ ತೋರಿದನೆನ್ನ ತಂದೆ. ಹಿಂದಿನ ಜನ್ಮಗಳನ್ನೆಲ್ಲ ಬಿಡಿಸಿ ಮುಂದೆ ದಾರಿ ಯಾವುದು ಎಂದು ತಿಳಿಸಿಕೊಟ್ಟರು ಚೆನ್ನಮಲ್ಲಿಕಾರ್ಜುನನ ತೋರಿದನೆನ್ನ ಗುರು. ಪರಮಾತ್ಮ ಚೆನ್ನಮಲ್ಲಿಕಾರ್ಜುನ ಅವನನ್ನು ಸಾಧಿಸಿಕೊಳ್ಳುವ ಗುರಿ ತೋರಿದರು. ಈ ದೇಶದಲ್ಲಿ ಹೆಣ್ಣು ಮಕ್ಕಳಿಗೆ ಸ್ವತಂತ್ರ ಆಲೋಚನೆ, ಚಿಂತನೆಗೆ ಅವಕಾಶವೆ ಇಲ್ಲ. ಒತ್ತಾಯದಿಂದ ಹೆಣ್ಣುಮಕ್ಕಳನ್ನು ಗೃಹಸ್ಥ ಜೀವನಕ್ಕೆ ಎಳೆಯಲಾ ಗುತ್ತದೆ. ಹೀಗೆ ಒತ್ತಾಯದಿಂದ ಗೃಹಸ್ಥ ಜೀವನಕ್ಕೆ ಅಕ್ಕನವರನ್ನು ಎಳೆಯುವ ಪ್ರಯತ್ನ ನಡೆಯಿತು. ಆದರೆ ಅವರು ಇರುವ ಮಿತಿಯಲ್ಲಿಯೆ ಉಪವಾಸಾದಿಗಳಿಂದ 3 ಷರತ್ತುಗಳಿದ ಹೇಗೊ ಪಾರಾದರು.ನನ್ನ ಗುರಿ ಅನುಭಾವ. ಚೆನ್ನಮಲ್ಲಿಕಾರ್ಜುನ ದೇವರನ್ನು ಪಡೆಯುವುದು. ಶ್ರೀಗುರುಲಿಂಗದೇವರಿಂದ ದೀಕ್ಷೆಯಾದ ಘಟನೆ ಅವರ ಜೀವನವನ್ನು ಬದಲಿಸಿತು.

6) ಸಜ್ಜನಳಾಗಿ ಮಜ್ಜನಕ್ಕೆರೆವೆ. ಶಾಂತಳಾಗಿ ಪೂಜೆಯ ಮಾಡುವೆ. ಸಮರತಿಯಿಂದ ನಿಮ್ಮ ಹಾಡುವೆ. ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮನಗಲದ ಪೂಜೆ ಅನುವಾಯಿತ್ತೆನಗೆ.

### ಪದಗಳ ಅರ್ಥ

ಸಜ್ಜನೆ-ಶುದ್ಧ ಅನುಭಾವಿ, ಸದ್ಭಕ್ತೆ ಮಜ್ಜನ-ಇಷ್ಟಲಿಂಗಕ್ಕೆ ಭಕ್ತಿಮಜ್ಜನ .
ಸಮರತಿ --ಸಮಭಾವ,
ಅನು-ಸಾಧ್ಯ .
ಪೂಜೆ-ಭಕ್ತಿ

### ವಚನದ ಅರ್ಥ

ಪರಿಶುದ್ಧಳಾಗಿ ಇಷ್ಟಲಿಂಗಕ್ಕೆ ಮಜ್ಜನ ಮಾಡಿಸುತ್ತೇನೆ. ಶಾಂತಭಾವ ನಿರ್ಮಲ ಮನಸ್ಸಿನಿಂದ ಪತ್ರೆ,ಪುಷ್ಪಾದಿಗಳಿಂದ ಪೂಜಿಸುತ್ತೇನೆ. ಸಮಭಾವ ಸಮಸುಖದಲ್ಲಿದ್ದು ನಿಮ್ಮನ್ನು ಹಾಡುತ್ತೇನೆ. ಚೆನ್ನಮಲ್ಲಿಕಾರ್ಜುನದೇವ ನಿಮ್ಮನ್ನು ಎಂದೆಂದೂ ಪೂಜಿಸುವಭಾಗ್ಯ ದೊರೆಯಿತು. ನಾನು ಧನ್ಯ.

7) ಸಟೆದಿಟವೆಂಬೆರಡುವಿಡಿದು ನಡೆವುದೀಲೋಕವೆಲ್ಲವು.
ಸಟೆದಿಟವೆಂಬೆರಡುವಿಡಿದು ನಡೆವನೆ ಶರಣನು.
ಗುರುಲಿಂಗಜಂಗಮದಲ್ಲಿ ಸಟೆಯ ಬಳಸಿದಡೆ ಅವನು ತ್ರಿವಿಧಕ್ಕೆ ದ್ರೋಹಿ. ಅಘೋರ ನರಕಿ. ಉಂಬುದೆಲ್ಲ ಕಿಲ್ಬಿಷ. ತಿಂಬುದೆಲ್ಲ ಅಡಗು. ಕುಡಿವುದೆಲ್ಲ ಸುರೆ.
ಹುಸಿಯೆಂಬುದೆ ಹೊಲೆ. ಶಿವಭಕ್ತಂಗೆ ಹುಸಿಯೆಂಬುದುಂಟೆ ಅಯ್ಯ?
ಹುಸಿಯನಾಡಿ ಲಿಂಗವ ಪೂಜಿಸಿದಡೆ ಹೊಳ್ಳ ಬಿತ್ತಿ ಫಲವನರಸುವಂತೆ ಕಾಣಾ. ಚೆನ್ನಮಲ್ಲಿಕಾರ್ಜುನಾ.

## ಪದಗಳ ಅರ್ಥ

ಅಡಗು- ಅಭಕ್ಷ್ಯ ಸಸ್ಯಾಹಾರವಲ್ಲದ್ದು. ಹೊಳ್ಳು-ಜೊಳ್ಳು

## ವಚನದ ಅರ್ಥ

ಈ ಜಗತ್ತಿನ ವ್ಯವಹಾರಿಕನೀತಿಯನ್ನು ಕುರಿತು ವಿಶೇಷಿಸಿದ ವಚನವಿದು. ಈ ಜನರು ಹೇಳುವುದು ಒಂದು ಮಾಡುವುದು ಮತ್ತೊಂದು. ಮುಗ್ಧರಾದ ಅಕ್ಕಮಹಾದೇವಿಯವರಿಗೆ ಈ ಜನರ ರೀತಿ ನೀತಿಯನ್ನು ಕಂಡು ಆಶ್ಚರ್ಯವಾಗಿದೆ. ಯಾವು ದನ್ನು ದೇವರು ಎಂದು ಪೂಜಿಸುತ್ತಾನೊ ಅದನ್ನು ತೆಗೆದುಕೊಂಡು ಹೋಗಿ ನೀರಿನಲ್ಲಿ ಮುಳುಗಿಸುತ್ತಾನೆ. ದೇವರನ್ನು ಏನೆಲ್ಲ ಸರ್ವಶಕ್ತನೆಂದು ಕೊಂಡಾಡುತ್ತಾನೆ. ಆ ದೇವರನ್ನು ಹೊಲಸು ತಿನ್ನುವ ಪ್ರಾಣಿಯಾಗಿ ಕಲ್ಪಿಸಿಕೊಂಡಿದ್ದಾನೆ. ದೆವರನ್ನು ವರದಹಸ್ತ ಎಂದು ಹೇಳುತ್ತಾನೆ ಆ ದೇವರು ಒಬ್ಬ ಋಷಿಯ ಶಾಪಕ್ಕೆ ತುತ್ತಾಗಿ ಜನ್ಮ ಜನ್ಮದಲ್ಲಿ ಬರುತ್ತಾನೆ. ಈ ದೇವರಿಗಿಂತ ಒಬ್ಬ ಋಷಿ ಮಿಗಿಲಾಗಿ ಕಾಣುತ್ತಾನೆ. ದೇವರು ಸರ್ವಾಂತರ್ಯಾಮಿಯೆನ್ನುತ್ತಾನೆ. ಇಲ್ಲಿ ಮಾತ್ರ ಇದ್ದಾನೆ ಎಂದು ಒಂದು ಕಡೆ ಕೂಡಿಹಾಕುತ್ತಾನೆ.

ದೇವರು ಚೈತನ್ಯಮಯ ಎನ್ನುತ್ತಾನೆ. ಕಲ್ಲು, ಮಣ್ಣು ದೇವರು ಎನ್ನುತ್ತಾನೆ. ಈ ದೆವರುಕೇಳಿದ್ದು ಕೊಡುತ್ತಾನೆ . ಅವನೆ ನಮ್ಮನ್ನು ಸೃಷ್ಟಿಸಿದ್ದಾನೆ ಎನ್ನು ತಾನೆ . ಅವನನ್ನು ಪಡೆಯಲು ಅವನ ಬಳಿಗೆ ಹೋಗುತ್ತೇನೆ. ಎಂದರೆ ಬೇಡ .ಅದು ಸಾಧ್ಯವಿಲ್ಲ ಅದು ಕಥೆ ಎನ್ನುತ್ತಾನೆ. ಸತ್ಯವನ್ನು ಹೇಳು ಎನ್ನುತ್ತಾನೆ. ಅಸತ್ಯವನ್ನೆ ಹೇಳು ತಾನೆ. ದೇವರನ್ನು ಸರ್ವಶಕ್ತ ಎನ್ನುತ್ತಾನೆ ಆದೇವರುಗಳು ದೈತ್ಯರಿಗೆ ಹೆದರುತ್ತಾರೆ. ದೇವರು ಒಬ್ಬನೆ ಎನ್ನುತ್ತಾನೆ ಅನೇಕ ದೇವರು ಇದ್ದಾರೆ ಎನ್ನುತ್ತಾನೆ. ಎಲ್ಲ ಗೊಂದಲ. ಅವನಿಗೆ ಸರಿ ಯಾವುದು ತಪ್ಪು ಯಾವುದು ನಿರ್ಣಯವಿಲ್ಲ. ಅಮೃತ ಮಥನದಿಂದ ಬಂದುದನ್ನು ಸಮಪಾಲು ಹಂಚಿಕೊಳ್ಳೋಣ ಎನ್ನುತ್ತಾರೆ. ತಾವೆ ಎಲ್ಲ ತೆಗೆದು ಕೊಂಡುಬಿಡುತ್ತಾರೆ. ಕೇಳಲುಹೋದರೆ ಕೊಂದುಬಿಡುತ್ತಾರೆ. ಇಂದಿನ ಬಂಡವಾ ಳಷಾಹಿಗಳು ಮಾಡುವುದನ್ನೆ ಈ ದೇವರುಗಳು ಹಿಂದೆ ಮಾಡಿ ಮುಗಿಸಿವೆ. ಕಾರ್ಮಿಕ,ಮಾಲೀಕರನಡುವಿನ ಅಂತರ ಆ ದೇವರುಗಳು-ರಾಕ್ಷಸರಿಗೂ ಇದೆ. ಯಾಕೆ ಈ ಹುಸಿ,ಮೋಸ, ವಂಚನೆ, ಸುಳ್ಳು. ಸತ್ಯಾನ್ವೇಷಕನಾದವನು ನಿಜವನ್ನೆ ನುಡಿಯ ಬೇಕಲ್ಲವೆ? ಮನುಷ್ಯ ಸ್ವಾರ್ಥಕಾರಣವಾಗಿ. ಈದೇಹಕಾರಣವಾಗಿ ಏನೆಲ್ಲ ಕಥೆ, ಉಪಕಥೆ ಗಳನ್ನು ಇನ್ನು ಏನೇನು ಅಗತ್ಯವೊ ಅವೆಲ್ಲ ಹುಸಿ ದಾರಿಗಳನ್ನು ಹುಡುಕುತ್ತ ಬಂದಿದ್ದಾನೆ. ಇದುಅಕ್ಕಮಹಾದೇವಿಯವರಿಗೆ ಬೇಕಾಗಿಲ್ಲ. ಅವರಿಗೆ ಸತ್ಯವೊಂದೆ ಬೇಕಾಗಿದೆ. ಈನಡೆ ನುಡಿ ಒಂದಾಗದ ಕಾರಣವಾಗಿ ಲೋಕದಲ್ಲಿ ಅಮಾಯಕರು,ಮುಗ್ಧರು ಅನುಭವಿಸುತ್ತಿರುವ ತೊಂದರೆಗಳು ಒಂದೆ ಎರಡೆ? ಹಸಿವು, ದುಃಖಗಳು ಕಾಡಿದರೆ ಮನುಷ್ಯ ದೇವರ ಕಡೆ ನೋಡುವ ಅಗತ್ಯವಿಲ್ಲ. ಆರ್ಥಿಕ ವ್ಯವಸ್ಥೆಯಿಂದಾಗಿ, ಇಂತಹ ಅನಾಹುತಗಳು ನಡೆಯುತ್ತಿವೆ. ಇವನ್ನು ಆರ್ಥಿಕ ನೆಲೆಯಲ್ಲೆ ನೋಡಬೇಕು.
ಈ ವಚನದ ಭಾವವೇನು? ಸಟೆದಿಟ ಎರಡನ್ನು ಹಿಡಿದು ಮನುಷ್ಯ ನಡೆಯುತ್ತಿದ್ದಾನೆ. ಶರಣರು ಸುಳ್ಳು, ಸತ್ಯ ಹಿಡಿದು ನಡೆಯುವುದಿಲ್ಲ. ಹಸಿವು,ಹೊಟ್ಟೆ ಸ್ವಾರ್ಥಕ್ಕಾಗಿ ಗುರುಲಿಂಗ ಜಂಗಮದಲ್ಲಿ ಸುಳ್ಳು ಹೇಳಿ ವಂಚನೆ ಮಾಡಬಾರದು. ಶರಣರಾದವರು ಹೊಟ್ಟೆಪಾಡಿಗಾಗಿ ಬದುಕುವವರಲ್ಲ. ಅವರಿಗೆ ಹಣ, ಕೀರ್ತಿ, ಅಧಿಕಾರ ಹೊನ್ನು ಹೆಣ್ಣು ಮಣ್ಣುಗಳು ಮುಖ್ಯವಲ್ಲ. ಆಶೆಯಿಂದ ಬದುಕುವವರಲ್ಲ ಶರಣರು. ಸತ್ಯಕ್ಕಾಗಿ ಬದುಕುವವರು ಶರಣರು. ಯಾರು ದೇಹದಾಶೆಯಿಂದ ಸತ್ಯ ಸ್ವರೂಪಿಗಳಿಗೆ ವಂಚನೆಮಾಡಿ ವಿಷಯಾದಿಗಳನ್ನು ಸೇವಿಸುತ್ತಾನೊ ಅವು ಪಾವಿತ್ರ್ಯ, ಕಳೆದುಕೊಳ್ಳುತ್ತವೆ. ಪ್ರಸಾದವುವಿಷವಾಗಿ,ಪಾನಕ,ಎಳನೀರು,ಹಾಲು ಪಾನೀಯಗಳು ಮೂತ್ರಾದಿ ಅಪೇಯ, ಅಭಕ್ಷ್ಯಗಳಾಗುತ್ತವೆ.ಹೊಲೆ ಎಂಬುದು ಜಾತಿಯಲ್ಲ. ಅದು ವಂಚನೆ ಹುಸಿಯೆ ಹೊಲೆ. ಸುಳ್ಳು ಹೇಳಿ

ಲಿಂಗಪೂಜೆ ಮಾಡಿದರೆ ಜೊಳ್ಳುಕುಟ್ಟಿ, ಕೈ ಬೊಬ್ಬೆ ಬರಿಸಿಕೊಂಡಂತೆ. ಶಿವಾನುಭಾವದ ದಾರಿಗೆ ಬಂದವರು ಸುಳ್ಳು ವಂಚನೆ ತೊರೆದು ನಿಜದ ದಾರಿಯಲ್ಲಿ ನಡೆಯಬೇಕು

8)ಸತ್ತ ಹೆಣ ಕೂಗಿದುದುಂಟು. ಬೈಚಿಟ್ಟ ಬಯಕೆ ಕರೆದುದುಂಟು. ಹೆಪ್ಪಿಟ್ಟ ಹಾಲು ಗಟ್ಟಿಗೊಂಡು ಸಿಹಿಯಾದುದುಂಟು. ಇದ ನಿಶ್ಚಯಿಸಿ ನೋಡಿ ಚೆನ್ನಮಲ್ಲಿಕಾರ್ಜುನ ದೇವರಲ್ಲಿ.

ಪದಗಳ ಅರ್ಥ

ಸತ್ತಹೆಣ-ನಿದ್ರೆಗೆ ಹೋದ ದೇಹ. ಕೂಗು-ಮಾತಾಡು,
ಬಯಕೆ-ಆಶೆ,
ಬೈಚಿಟ್ಟ-ಬಚ್ಚಿಟ್ಟ .
ಕರೆ-ಮಾತಾಡಿಸು,ಕೂಗು.

ವಚನದ ಅರ್ಥ

ಇದೊಂದು ದಿವ್ಯ ಅನುಭೂತಿಯ ವಚನ. ಶೂನ್ಯ ಸಂಪಾದನಕಾರರು ಪ್ರಭುದೇವರು ಅಕ್ಕಮಹಾದೇವಿಯವರ ನಡುವೆ ನಡೆದ ಅನುಭವಮಂಟಪದ ಸಂವಾದದ ರೀತಿಯಲ್ಲಿ ಸಂಯೋಜಿಸಿದ್ದಾರೆ. ಪ್ರಭುದೇವರ ಪ್ರಶ್ನೆಗಳಿಗೆ ಅಕ್ಕನವರು ನೀಡಿದ ಉತ್ತರದಂತೆ ಈ ವಚನ ಸಂಯೋಜಿಸಿದ್ದಾರೆ.

ನಿತ್ಯ ಜೀವನವನ್ನು ಕೂಡ ನಾವು ಸರಿಯಾಗಿ ಗ್ರಹಿಸಿರುವುದಿಲ್ಲ. ಪ್ರತಿದಿನ ನಾವು ನಿದ್ರೆಗೆ ಹೋದರೂ ಆ ನಿದ್ರೆಯಬಗೆಗೆ ನಾವು ಸರಿ ತಿಳಿದಿರುವುದಿಲ್ಲ. ಈ ದೇಹವು ನಿದ್ರಾವಧಿಯಲ್ಲಿ ಏನಾಗಿರುತ್ತದೆ . ಇದನ್ನು ಕೂಡ ನಾವು ವಿವರಿಸಲಾರೆವು . ಇಂತಹ ಸಂಗತಿಗಳನ್ನು ಕೂಡ ಅಕ್ಕನವರು ತುಂಬ ಮಾರ್ಮಿಕವಾಗಿ ದೃಷ್ಟಾಂತವಾಗಿ ಬಳಸಿಕೊಂಡು ಸೊಗಸಾಗಿ ಉತ್ತರ ನೀಡುತ್ತಾರೆ.ಸತ್ತಹೆಣ ಕೂಗಿದುದುಂಟು. ಬೈಚಿಟ್ಟ ಬಯಕೆ ಕರೆದುದುಂಟು. ಸತ್ತ ಹೆಣ ಎಂದರೆ ನಿದ್ರೆಗೆ ಹೋದ ಶರೀರ. ಕೂಗಿದುದು ಎಂದರೆ ಎದ್ದು ಕುಳಿತುದು ಎಂದರ್ಥ. ಭೂಮಿಯಲ್ಲಿ ಬಚ್ಚಿಟ್ಟ ನಿಧಿ ಯಾರಿಗಾದರೂ ಕಾಲವಶದಲ್ಲಿ ಸಿಕ್ಕುತ್ತದೆ. ಸಿಕ್ಕಿದಾಗ ಅದು ಅವರನ್ನು ಕರೆದುದುಂಟು. ಎಂದರೆ ನಿಧಿ ಅವರಿಗೆ ದೊರೆಯುತ್ತದೆ.ಹೆಪ್ಪಿಟ್ಟ ಹಾಲು ಗಟ್ಟಿಗೊಂಡು

ಸಿಹಿಯಾದುದುಂಟು. ಹಾಲಿಗೆ ಹೆಪ್ಪು ಹಾಕಿದಾಗ ಅದು ಮುಂದೆ ಮೊಸರಾಗುವುದು. ಕಡೆದರೆ ಸಿಹಿಯಾದ ಪರಿಮಳ ಯುಕ್ತವಾದ ತುಪ್ಪ ದೊರೆಯುವುದು. ಇದ ನಿಶ್ಚಯಿಸಿ ನೋಡಿ ಚೆನ್ನಮಲ್ಲಿಕಾರ್ಜುನದೇವರಲ್ಲಿ. ಇದನ್ನು ಸರಿಯಾಗಿ ತಿಳಿದು ನೋಡಿರಿ. ಗೊತ್ತಾಗುತ್ತದೆ. ಅನುಭಾವದ ಪ್ರಶ್ನೆಗಳಿಗೆ ಅಷ್ಟೇ ಸರಳವಾಗಿ ಅಕ್ಕನವರು ಉತ್ತರಿಸಿಬಿಡುತ್ತಾರೆ. ಎಂತಹ ಕಠಿನ ಪ್ರಶ್ನೆಗಳಿಗೂ ಅಷ್ಟೇ ಸರಳವಾದ ಉತ್ತರ ಕೂಡಲೆ ಕೊಡುತ್ತಾರೆ. ಅಮೋಘ.

8)ಸಾಕ್ಷಿ ಸತ್ತಿತ್ತು. ಪತ್ರ ಸುಟ್ಟಿತ್ತು. ಲೆಕ್ಕ ತುಂಬಿತ್ತು. ಬೇವ ಜೀವಿತದ ಆಸೆ ನಿಂದುದು. ಭಾಷೆ ಹೋಯಿತ್ತು. ಜಗವೆಲ್ಲ ಅರಿಯೆ ಎನ್ನದೇವ ಚೆನ್ನಮಲ್ಲಿಕಾರ್ಜುನನ ನಂಬಿ ಬಯಲ ಮರೆದೆನಾಗಿ.

## ಪದಗಳ ಅರ್ಥ

ಸಾಕ್ಷಿ-ಬ್ರಹ್ಮ,
ಪತ್ರ-ಉದ್ದೇಶ,
ಲೆಕ್ಕ-ಹಂಬಲ, ಸಾಧನೆ .
ಭಾಷೆ-ಪ್ರತಿಜ್ಞೆ
ಬೇವ-ಕಳ ವಳಿಸುವ,ಜೀವಿತದ ಆಸೆ-ಚೆನ್ನಮಲ್ಲಿಕಾರ್ಜುನನನ್ನು ಪತಿಯನ್ನಾಗಿಪಡೆಯಬೇಕೆಂಬ ಇಚ್ಛೆ. ಬಯಲು-ಬ್ರಹ್ಮ.

## ವಚಪದ ಅರ್ಥ

ತಪಸ್ಸು,ಸಾಧನೆಯಿಂದ ಈಗ ಅವರು ಎಲ್ಲ ಭ್ರಮೆಗಳನ್ನು ದಾಟಿದ್ದಾರೆ. ಸಾಕ್ಷಾತ್ಕಾರದ ಈವಚನವು ಮನುಷ್ಯ ಏರಬಹುದಾದ ಎತ್ತರಕ್ಕೆ ಸಾಕ್ಷಿಯಾಗಿದೆ. ಮೇಲಿನ ವಚನವು ಇಂಥದೆ ಇನ್ನೊಂದು ಜ್ಞಾನೋದಯದ ವಚನ. ಸಾಕ್ಷಿಸತ್ತಿತ್ತು ಪತ್ರ ಸುಟ್ಟಿತ್ತು. ಲೆಕ್ಕ ತುಂಬಿತ್ತು.
ಹಸಿವೆನೀನು ನಿಲ್ಲು ನಿಲ್ಲು ಚೆನ್ನ ಮಲ್ಲಿಕಾರ್ಜುನನ ಬಳಿಗೆ ಅವಸರದ ಓಲೆಒಯ್ಯುತ್ತಿದ್ದೇನೆ ಎಂದು ಹೇಳಿದ್ದರು ಈಗ ಆ ಪತ್ರ ಸುಟ್ಟಿದೆ. ಓಲೆ ಓದುವ ಚೆನ್ನಮಲ್ಲಿಕಾರ್ಜುನನು ಮನುಷ್ಯರೂಪದವನಲ್ಲ. ಅವನಿಗೆ ಪತ್ರ ಓದಲು ಕನ್ನಡ ಭಾಷೆಯೂ ಬರುವುದಿಲ್ಲ. ಅವನು ಶರೀರಧಾರಿಯೆ ಅಲ್ಲ.

ಎಂದಮೇಲೆ ಎಲ್ಲ ಕನಸುಗಳೂ ಹೋದವು. ಕನಸಿದ್ದೆಲ್ಲ ಬಯಲ ಭ್ರಮೆಯಾಗಿ ಹೋಯಿತು. ಅಕ್ಕಮಹಾದೇವಿಯವರು ಮಹಾತ್ಮರಾದರು. ಅವರಿಗೆ ಮಹಾತ್ಮಪದವಿ ಬೇಕಿಲ್ಲ. ಚೆನ್ನ ಮಲ್ಲಿಕಾರ್ಜುನ ಬೇಕು. ಆದರೆ ಆ ಸತ್ಯ ಬೇರೆಯೆ ಆದ ಸತ್ಯವಾಯಿತು. ಇದು ದೊಡ್ಡ ಆಘಾತ. ಈ ಜೀವ, ಜಗತ್ತು ಸೂರ್ಯ, ಚಂದ್ರ, ನಕ್ಷತ್ರಾದಿಗಳೆಲ್ಲವೂ ಬಯಲಿನಿಂದ ಬಂದುದು. ಆ ಬಯಲಿಗೆ ಹೋಗುವವು. ಇನ್ನು ಯಾವ ದೇವರು? ಯಾವ ಕಥೆಗಳು? ಇವುಗಳಿಂದ ಆಗುವುದೇನಿದೆ? ಅಕ್ಕನವರ ಮನಸ್ಸನ್ನು ಬಯಲು,ಶೂನ್ಯ ತುಂಬಿತು. ಅಕ್ಕನವರಿಗೆ ಇದು ಮರುಜನ್ಮ. ಇಲ್ಲಿನ ಅರಿವೆ ಬೇರೆ. ಬೇವ ಜೀವಿತದ ಆಸೆ ನಿಂದುದು. ಭಾಷೆ ಹೋಯಿತ್ತು. ಎಲ್ಲರಿಗೆ ಭಾಷೆ ಕೊಟ್ಟಿದ್ದೆ ಚೆನ್ನಮಲ್ಲಿಕಾರ್ಜುನನನ್ನು ಪತಿಯನ್ನಾಗಿ ಪಡೆಯುತ್ತೇನೆ ಎಂದು ಈಗ ಆಭಾಷೆ, ಪತ್ರ ಹೋಯಿತು ಪತ್ರವನ್ನು ನಾನೆ ಸುಟ್ಟೆ ಭಾಷೆಯನ್ನು ನಾನೆ ಮುರಿದೆ. ಆಶೆಗಳೆಲ್ಲ ಹೋದವು ಇನ್ನು ಯಾವ ಆಶೆಯೂ ಉಳಿದಿಲ್ಲ. ಈ ಜೀವ ಇನ್ನು ಇದ್ದರೂ ಅಷ್ಟೆ.ಹೋದರೂ ಅಷ್ಟೆ ದೇಶವೆಲ್ಲ ಅರಿಯೆ ಎನ್ನದೇವ ಚೆನ್ನಮಲ್ಲಿಕಾರ್ಜುನನ ನಂಬಿ ಬಯಲ ಮರೆದೆನಾಗಿ. ಜಗತ್ತೆ ತಿಳಿಯುವಂತೆ ಚೆನ್ನಮಲ್ಲಿಕಾರ್ಜುನನೆ ನನ್ನ ಗಂಡ ಎಂದು ಸಾರಿದೆ. ಅವನನ್ನು ಪಡೆಯಲು ಬಂದೆ. ಆದರೆ ಈದೇಶವೆಲ್ಲ ಅಂತಹ ಕಥೆಗಳನ್ನು ಕಟ್ಟಿದೆ. ಚೆನ್ನಮಲ್ಲಿಕಾರ್ಜುನನು ಕಥೆಯ ಸತ್ಯವಾಗಿ ಮಾತ್ರ ಉಳಿದ. ಇದನ್ನು ನಂಬಿ ಬಂದೆ. ಈಗ ಆ ಹಂಬಲ ಮರೆದೆ. ಎಲ್ಲರೂ ದೇವರನ್ನು ಭಾವಸತ್ಯವಾಗಿ ನೋಡಿದರು. ಅಕ್ಕನವರು ಅವನನ್ನು ವಸ್ತು ಸತ್ಯದಲ್ಲಿ ಕಾಣಬಯಸಿದರು. ಅವರಿಗಾದ ದರ್ಶನ ಜಗದ ಕಣ್ಣು ತೆರೆಸಲಿ. ಇದು ಅಕ್ಕನವರಿಗೆ ಆಘಾತ. ಆದರೆ ಇದು ಜಗತ್ತಿಗೆ ಜ್ಞಾನೋ ದಯ. ಸತ್ ಹೇಗೆ ಅರ್ಥಪಡೆದುಕೊಳ್ಳುತ್ತದೆ ನೋಡಿ. ಅಶ್ಚರ್ಯವಾಗುತ್ತದೆ.

10). ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗಾನೊಲಿದೆ. ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ ಚೆಲುವಂಗಾನೊಲಿದೆ. ಭವವಿಲ್ಲದ, ಭಯವಿಲ್ಲದ ನಿರ್ಭಯಚೆಲುವಂಗಾನೊಲಿದೆ. ಕುಲಸೀಮೆಯಿಲ್ಲದ ನಿಸ್ಸೀಮ ಚೆಲುವಂಗಾನೊಲಿದೆ  ಚೆನ್ನಮಲ್ಲಿಕಾರ್ಜುನಾ ಚೆಲುವ ಗಂಡನೆನಗೆ ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು.ತಾಯಿ

ಪದಗಳ ಅರ್ಥ

ಕೇಡು-ನಾಶ.
ರೂಹು-ರೂಪ,
ಎಡೆ-ಸ್ಥಳ
ಕಡೆ-ಕೊನೆ
ತೆರಹು-ಪೊಳ್ಳು.
ಕುಲ-ಜಾತಿ.
ಸೀಮೆ -ದೇಶ
ನಿಸ್ಸಿಮ-ಧೀರ .

ವಚನದ ಅರ್ಥ ಮಾಡಿಕೊಳ್ಳಲು

ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗಾನೊಲಿದೆ. ಮರಣವಿಲ್ಲ.ನಾಶವಿಲ್ಲ ಆಕಾರವಿಲ್ಲ. ಆದರೂ ಅತಿಚೆಲುವ. ಅವನಿಗೆ ನಾನು ಒಲಿದಿದ್ದೇನೆ.ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ ಚೆಲುವಂಗಾನೊಲಿದೆ. ಒಂದಿಷ್ಟೂ ಪೊಳ್ಳು ಬಿಡದಹಾಗೆ, ಕೊನೆಮೊದಲಿಲ್ಲದೆ ತನಗೊಂದು ಅಂತ್ಯವಿಲ್ಲದೆ, ಇನ್ನೊಂದಕ್ಕೆ ಅವಕಾಶವಿಲ್ಲದೆ ತನಗೊಂದು ಗುರುತು ಕೂಡ ಇಲ್ಲದ ಚೆಲುವ ಸುಂದರನಿಗೆ ನಾನು ಒಲಿದಿದ್ದೇನೆ . ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗಾನೊಲಿದೆ. ಜನನ ಮರಣ ವಿದೂರನಾದ, ಹೆದರಿಕೆಯೇ ಇಲ್ಲದ, ನಿರ್ಭಿತನೂ ಪರಾಕ್ರಮಿಯೂ ಅದ ಸುಂದರ ಚೆಲುವನಿಗೆ ನಾನು ಒಲಿದಿದ್ದೇನೆ.
ಕುಲಸೀಮೆಯಿಲ್ಲದ ನಿಸ್ಸಿಮ ಚೆಲುವಂಗಾನೊಲಿದೆ. ಯಾವುದೆ ಜೀವಜಾಲದಲ್ಲಿ ಹುಟ್ಟಿರದ, ಕುಲ, ಜಾತಿಗಳಿಲ್ಲದ, ಒಂದು ಊರಿಗೆ, ದೇಶಕ್ಕೆ ಸೀಮಿತನಾಗಿರದ, ಸೀಮೆಯೆಯಿಲ್ಲದ, ಸೀಮಾತೀತ ನಾದ ಚೆಲುವನಿಗೆ ನಾನು ಮನಸೋತಿದ್ದೇನೆ. ಚೆನ್ನಮಲ್ಲಿಕಾರ್ಜುನ ಚೆಲುವ ಗಂಡ ನೆನಗೆ .ಅತಿ ಸುಂದರಚೆಲುವನಾದ ಚೆನ್ನಮಲ್ಲಿಕಾರ್ಜುನನು ನನ್ನ ಗಂಡನು . ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು. ಮರಣದಿಂದ ನಾಶವಾಗುವ ಈ ವರನನ್ನು ತೆಗೆದುಕೊಂಡು ಹೋಗಿ ಒಲೆಯೊಳಗಿಕ್ಕಿ ಉರಿಸಿಬಿಡು. ಕೌಶಿಕ ರಾಜ ದೇಶವಾಳುವ ರಾಜನುಗಂಡನಾಗುವೆ ಎಂದು ಮುಂದೆ ಬಂದಿರುವಾಗ ಅವನನ್ನು ಒಲೆಯಳಗಿಕ್ಕಿ ಉರಿಸಿಬಿಡು ಎನ್ನುವ ಮಾತೆ ಅಚ್ಚರಿಯದು. ಆ ಧೈಯ್ಯ, ಅಮೋಘ. ರಾಜನೆದೇವರು . ಪತಿಯ ದೇವರು ಹೀಗೆಲ್ಲ ನಿಯಮ ಮಾಡಿ ಜನರ ಮನಸ್ಸನ್ನು ಆಕ್ರಮಿಸುತ್ತಿರುವಾಗ ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು ಎನ್ನುವ ಮಾತು ಈ ರಾಜ ವ್ಯವಸ್ಥೆಯನ್ನು

ಧಿಕ್ಕರಿಸಿದ ಕೆಚ್ಚೆದೆಯವಾಣಿ. ರಾಜನನ್ನು ವೈಭವಿಸಿ, ರಾಜನೆ ದೇವರೆಂದು ಕಾವ್ಯ ಬರೆಯುತ್ತಿರುವ ಕಾಲದಲ್ಲಿ, ರಾಜನ ಆಸ್ಥಾನದಲ್ಲಿ ಬಿರುದುಗಳನ್ನು ರಾಜಾಶ್ರಯವನ್ನೂ ಪಡೆಯಲು ನಾಮುಂದು ತಾಮುಂದು ಎಂದು ಕವಿಗಳು ಪರಾಕು ಹೇಳುತ್ತಿರುವ ಕಾಲದಲ್ಲಿ ರಾಜನನ್ನು ಒಲೆಯೊಳಗಿಕ್ಕು ಎಂದು ಹೇಳಿದ್ದು ಒಂದು ದೊಡ್ಡ ಕ್ರಾಂತಿ. ಎಲ್ಲಕಾಲದಲ್ಲೂ ಅಧಿಕಾರ ಹಿಡಿದವರನ್ನು ಕೊಂಡಾಡಲು ಜನ ನೂಕುನುಗ್ಗಲು ಸುಖವನ್ನು ಅರಮನೆಯನ್ನು ಕೀರ್ತಿಯನ್ನು ,ಸಿಗಲಿರುವ ರಾಣಿಪದವಿಯನ್ನೂ ನಿರಾಕರಿಸಿದ ಸ್ವಾತಂತ್ರ್ಯದ ಹಕ್ಕಿ ಅಕ್ಕಮಹಾದೇವಿಯವರು.

ಅಕ್ಕಮಹಾದೇವಿಯವರ ಇಂತಹ ವಚನಗಳು ಏಕಕಾಲಕ್ಕೆ ಸುಂದರ ಭಾವಗೀ ತವೂ ಹೌದು.ಸ್ತ್ರೀ ಸ್ವಾತಂತ್ರ್ಯದ ನೆಲೆಯಲ್ಲಿ ವ್ಯಕ್ತಿವಿಚಾರಗಳನ್ನು ಮುಂದಿಟ್ಟು ಅವುಗಳಿಗೆ ಗಟ್ಟಿನೆಲೆ ಪಡೆದುಕೊಂಡ ದಿಟ್ಟೆಯೂ ಹೌದು. . ತನ್ನ ವಿಚಾರಗಳಿಗೆ ಮನ್ನಣೆ ಸಿಗದಿದ್ದಾಗ ವ್ಯವಸ್ಥೆ ಮತ್ತು ರಾಜನನ್ನು ಏಕಾಂಗಿಯಾಗಿ ಎದುರು ಹಾಕಿ ಕೊಂಡು ತನ್ನ ಗುರಿ ಸಾಧಿಸಿಕೊಂಡ ಮಹಾನುಭಾವಿಯೂ ಹೌದು. ಜಗತ್ತಿನ ಮೊದಲ ಮಹಿಳಾ ಸ್ವಾತಂತ್ರ್ಯದ ಧೀರೆ ಮಹಿಳೆ ಅಕ್ಕಮಹಾದೇವಿಯವರು.

11)ಸುಖದ ಸುಖಗಳ ಸಂಭಾಷಣೆಯಿಂದ
ದುಃಖಕ್ಕೆ ವಿಶ್ರಾಮವಾಯಿತ್ತು.
ಭಾವಕ್ಕೆ ಭಾವ ತಾರ್ಕಣೆಯಾದಲ್ಲಿ
ನೆನಹಿಂಗೆ ವಿಶ್ರಾಮವಾಯಿತ್ತು.
ಬೆಚ್ಚಿ ಬೆರಸಲೊಡನೆ ಮಚ್ಚು ಒಳಕೊಂಡಿತ್ತಯ್ಯ.
ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣರ ಸಂಗದಿಂದ

ಪದಗಳ ಅರ್ಥ

ಸುಖದಸುಖಿಗಳು-ಆನಂದದಅನುಭಾವಿಗಳು,
ಸಂಭಾಷಣೆ-ಗೋಷ್ಠಿ
ಭಾವ-ಶುದ್ದ ಮನಸ್ಸು ತಾರ್ಕಣೆ-ಹೊಂದಿಕೆ,
ಬೆಚ್ಚಿಬೆರಸು-ಚರ್ಚೆಗೆ ಸೇರು.
ಮಚ್ಚು-ಸ್ನೇಹ .

## ವಚನದ ಅರ್ಥ

ಸುಖದ ಸುಖಿಗಳ ಸಂಭಾಷಣೆಯಿಂದ ದುಃಖಕ್ಕೆ ವಿಶ್ರಾಮವಾಯಿತ್ತು ಆನಂದದ ಅನುಭಾವಿಗಳ ಒಡನಾಟದಿಂದ ನಮ್ಮ ದುಃಖಗಳು ಕೊನೆಗೊಳ್ಳು ಇವೆ.ಭಾವಕ್ಕೆ ಭಾವ ತಾರ್ಕಣೆಯಾದರೆ ನೆನಹಕ್ಕೆ ವಿಶ್ರಾಮವಾಯಿತ್ತು. ಭಾವಭಾವಗಳು ಒಂದಾದರೆ ನೆನಪುಗಳು ವಿಶ್ರಮಿಸುತ್ತವೆ. ಬೆಚ್ಚು ಬೆರಸಲೊಡನೆ ಮಚ್ಚು ಒಳ ಕೊಂಡಿತ್ತಯ್ಯ.ಮೆಚ್ಚಿ ಒಂದಾದಲ್ಲಿ ಪ್ರೀತಿ ವೃದ್ದಿಯಾಗುತ್ತದೆ. ನಿಮ್ಮ ಶರಣರ ಸಂಗದಿಂದ ಬಾಳು ಬೆಳಗುತ್ತದೆ.

ಸುಖದ ಸುಖಿಗಳು ಎಂದರೆ ಯಾರು? ಸುಖ ಎಂದರೆ ಏನು?ಯಾವುದು ದೊಡ್ಡದು ತಿಳಿಯುವ. ದೊಡ್ಡದು, ಯಾವುದು? ಚಿರವಾದುದು ಅಂತಹುದರ ಆನಂದ ಏನಿದೆ ?ಅದು ನಿಜದ ಸುಖ, ದೇಹ ಇಂದ್ರಿಯಗಳ ಸುಖವು ಅಲ್ಪವೂ, ಕ್ಷುಲ್ಲಕವೂ ಆದುದು. ಕಾರಣ ಈ ಸುಖ ಪಡೆಯುವಲ್ಲಿ ದ್ವೇಷಾಸೂಯೆಗಳು ಹುಟ್ಟುತ್ತವೆ. ಇಂತಹವರ ಒಡನಾಟಗಳು ಮನಸ್ಸಿಗೆ ಕಿರಿಕಿರಿಯನ್ನೂ ನೋವನ್ನೂ ಬೇಸರವನ್ನೂ ತರುತ್ತವೆ . ಸುಖದಸುಖಿಗಳು ಎಂದರೆ ಅರಿವು ಪಡೆದವರು. ಎಲ್ಲಿ ಅರಿವಿದೆ ಅಲ್ಲಿ ಆನಂದವಿದೆ. ಇದ್ದ ದುಃಖವನ್ನೂ ಅವರು ಕಳೆದು ಬಿಡುತ್ತಾರೆ. ದುಃಖ ಎಂದರೆ ಏನು? ಯಾವುದರ ಬಗೆಗೆ ಮೋಹ ಇದೆ.ಆ ಮೋಹ ನಿನ್ನನ್ನು ಲೋಕಕ್ಕೆ ಅಜ್ಞಾನಿ ಎಂದು ಪರಿಚಯಿಸುತ್ತದೆ. ಅಂತಹ ವಸ್ತುವಿನಲ್ಲಿ ಮೋಹಬೇಡ.ಯಾವ ವಸ್ತುವಿನಲ್ಲಿ ಬೇಕುಎಂದು ಪ್ರೀತಿ ಇಡುತ್ತೇವೆ ಅದು ಒಂದು ದಿನ ನಮ್ಮ ಕೈಬಿಡುತದೆ. ಇದು ದುಃಖದ ಮೂಲ. ಸುಖದ ಸುಖಿಗಳ ಸಂಭಾಷಣೆಯು ನಮಗೆ ಸತ್ಯದ ದರ್ಶನ ಮಾಡಿಸುತ್ತದೆ. ಆಗ ದುಃಖದ ನಾಶ. ಭಾವಕ್ಕೆ ಭಾವ ತಾರ್ಕಣೆಯಾ ದಲ್ಲಿನೆನಹಿಂಗೆ ವಿಶ್ರಾಮವಾಯಿತು. ಭಾವ ಭಾವಗಳು ಯಾವಾಗ ಒಂದಾಗುತ್ತವೆ. ಅಲ್ಲಿ ಮತ್ತೆ ನೆನಪುಗಳಿಲ್ಲ. ಎಲ್ಲವೂ ಸಮರಸ.ತಾರ್ಕಣೆ ಎಂದರೆ ಬ್ರಹ್ಮದ ಬಗೆಗೆ ಏನೂ ಮಾತನಾಡಲಾರದ ಅರಿವು. ಅಲ್ಲಿ ಮೌನವೇ ಆನಂದದ ಸ್ಥಿತಿ. ಇಂತಹ ಶರಣರ ಅನುಭಾವಿಗಳ ಒಡನಾಟಕ್ಕೆ ನನಗೆ ಪ್ರೀತಿಉಂಟಾಗಿದೆ ಎನ್ನುತ್ತಾರೆ ಅಕ್ಕಮಹಾದೇವಿಯವರು, ಇಂತಹವರ ಒಂದೊಂದು ನಡೆ ನೋಟ ಎಲ್ಲವೂ ಪ್ರೀತಿಯೆ. ಇನ್ನೊಬ್ಬರು ನಮಗೆ ಯಾವಾಗ ಇಷ್ಟವಾಗುತ್ತಾರೆ? ಅಲ್ಲಿ ಬೇಡಿಕೆಗಳಿರುವುದಿಲ್ಲ. ಸ್ವಾರ್ಥವಿರುವುದಿಲ್ಲ. ಅಲ್ಲಿ ಇತರರಿಂದ ಯಾವ ನಿರೀಕ್ಷೆಗಳೂ ಇರುವುದಿಲ್ಲ.ತಾನೆತಾನಾದ ಧ್ಯಾನ ಸ್ಥಿತಿ

ಅದು. ಸತ್ಯದ ಪ್ರೀತಿಯಿಂದ ಪರಸ್ಪರ ಗೌರವಾದರಗಳು ಹೆಚ್ಚುತ್ತವೆ.
(ಇದು ಶ್ರೀ ಶೈಲದಲ್ಲಿ ಶರಣರ ಒಡನಾಟದ ಪರಿಣಾಮ.)
ನಾವೂ ಸತ್ಯಸ್ವರೂಪರೆ ಆಗುತ್ತೇವೆ.

11) ಸಂಗದಿಂದಲ್ಲದೆ ಅಗ್ನಿ ಹುಟ್ಟದು.
ಸಂಗದಿಂದಲ್ಲದೆ ಬೀಜ ಮೊಳೆದೋರದು.
ಸಂಗದಿಂದಲ್ಲದೆ ಹೂವಾಗದು.
ಸಂಗದಿಂದಲ್ಲದೆ ಸರ್ವಸುಖದೋರದು.
ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮ ಮಹಾನುಭಾವಿಗಳ
ಸಂಗದದಿಂದಲಾನು ಪರಮಸುಖಿಯಾದೆನು.

## ಪದಗಳ ಅರ್ಥ

ಸಂಗ-ಗೋಷ್ಟಿ ಒಡನಾಟ,ಸಾನ್ನಿಧ್ಯ,ಸ್ಪರ್ಶ,ಉಜ್ಜುವುದು.

ವಚನದ ಅರ್ಥ
ಈ ವಚನದಲ್ಲಿ ಸಂಗ ಶಬ್ದಕ್ಕೆ ಭಿನ್ನ ಅರ್ಥಗಳನ್ನು ಹೊರಡಿಸಲಾಗಿದೆ. ಅದರಲ್ಲಿಯೂ ಅನುಭಾವ ಸಂಗ ವ್ಯಕ್ತಿಯ ಉನ್ನತ ಜೀವನಕ್ಕೆ ಪ್ರೇರಣೆ ಯಾಗುವುದೆಂಬುದನ್ನು ಪರಿಣಾಮಕಾರಿಯಾಗಿ ಹೇಳಲಾಗಿದೆ. ಸಂಗದಿಂದಲ್ಲದೆ ಅಗ್ನಿ ಹುಟ್ಟದು. ಹಿಂದೆ ಈಗಿನ ಹಾಗೆ ಬೆಂಕಿಪೊಟ್ಟಣಗಳು ಲೈಟರ್‌ಗಳು ಇರಲಿಲ್ಲ. ಅಗ್ನಿ ಹೊತ್ತಿಸಬೇಕಾದರೆ ಹರ ಸಾಹಸ ಮಾಡಬೇಕಾಗಿತ್ತು. ಒಣಕಟ್ಟಿಗೆಯನ್ನು ವಿಶೇಷವಾಗಿ ಗೊತ್ತಾದ ಕ್ರಮದಲ್ಲಿ ತಿಕ್ಕಿದಾಗ ಅಗ್ನಿ ಪ್ರಕಟವಾಗುತ್ತಿತ್ತು ಘರ್ಷಣೆ ಅನಿವಾರವಾಗಿತ್ತು. ಅಗ್ನಿ ಪ್ರಕಟವಾಗಬೇಕಾದರೂ ಎರಡು ವಸ್ತುಗಳ ಸಂಗ ಬೇಕು. ಸಂಗದಿಂದಲ್ಲದೆ ಬೀಜ ಮೊಳೆದೋ ರದು. ಬೀಜಕ್ಕೆ ಯೋಗ್ಯಮಣ್ಣಿನ ಮತ್ತು ನೀರಹನಿಯ ಸಂಗವಾದಾಗ ಮಾತ್ರ ಬೀಜ ಮೊಳಕೆಯೊಡೆಯುತ್ತದೆ. ಸಂಗದಿಂದಲ್ಲದೆ ಫಲವಾಗದು. ಒಂದು ಗಿಡ ಫಸಲು ಕೊಡಬೇಕಾದರೂ ಚಿಟ್ಟೆಯಿಂದ ಅಥವಾ ದುಂಬಿಯಿಂದ ಹೂವಿಂದ ಹೂವಿಗೆ ಪರಾಗಸ್ಪರ್ಶನಡೆಯಬೇಕು. ಅಂಡಾಣು ರೇತಾಣುವಿನ ಸಂಗವಾದಾಗ ಮಾತ್ರ ಫಲ ದೋರುತ್ತದೆ. ಸಂಗದದಿಂದಲ್ಲದೆ ಸರ್ವಸುಖದೋರದು. ಯಾವ ಸುಖ ದೊರೆಯ ಬೇಕಿದ್ದರೂ ಸಂಗ ಬೇಕು. ಸರ್ವಸುಖ ಬೇಕಿದ್ದರೂ ಎರಡು ಯೋಗ್ಯವಸ್ತುಗಳ ಸಂಗ ಬೇಕೇಬೇಕು.ಚೆನ್ನಮಲ್ಲಿಕಾರ್ಜುನಯ್ಯ

ನಿಮ್ಮ ಮಹಾನುಭಾವಿಗಳ ಸಂಗದಿಂದಲಾನು ಪರಮ ಸುಖಿಯಾದೆನು. ಚೆನ್ನಮಲ್ಲಿಕಾರ್ಜುನನೆ ನಾನು ನಿಮ್ಮ ಮಹಾನುಭಾವಿಗಳ ಅನುಭಾವಗೋಷ್ಠಿಯಿಂದ ನಾನು ಪರಮಸುಖ ಪಡೆದೆ. ಗೋಷ್ಠಿಯ ಪರಮಜ್ಞಾನವು ನಮ್ಮ ಅರಿವಿನ ದಿಗಂತವನ್ನು ವಿಸ್ತರಿಸುತ್ತದೆ. ಆವರಿವಿನ ವಿಸ್ತಾರವೆ ಪರಮಸುಖ, ಜೀವನ ವಿಕಾಸವಾಗುವುದೆ ಅರಿವಿನಿಂದ

13) ಸಂಸಾರವೆಂಬ ಹಗೆಯಯ್ಯ  ಎನ್ನ ತಂದೆ. ಎನ್ನ ವಂಶವಂಶದಪ್ಪದೆ ಅರಸಿಕೊಂಡುಬರುತ್ತಿದೆಯಯ್ಯ. ಎನ್ನುವನರಸಿಯರಸಿ ಹಿಡಿದು ಕೊಲುತ್ತಿದೆಯಯ್ಯ. ನಾನಿನ್ನ ಮೊರೆಹೊಕ್ಕೆ ಕಾಯಯ್ಯಾ.  ಎನ್ನ ಬಿನ್ನಪವನವಧಾಸು ಚೆನ್ನಮಲ್ಲಿಕಾರ್ಜುನಾ.

## ಪದಗಳ ಅರ್ಥ

ಮೊರೆ, ಪ್ರಾರ್ಥನೆ.
ಅವಧರಿಸು- ಕರುಣೆಯಿಂದ ಕೇಳು

## ವಚನದ ಅರ್ಥ

ಸಂಸಾರವೆಂಬ ಹಗೆಯಯ್ಯತಂದೆ ಎನ್ನವಂಶ ವಂಶದಪ್ಪದೆ ಅರಸಿಕೊಂಡು ಬರುತ್ತಿದೆಯಯ್ಯ. ಸಂಸಾರವು ನನ್ನ ಶತ್ರು. ಅದು ನನ್ನ ಮನೆತನವನ್ನು, ಹುಡುಕಿ ಬೇಡುಕಿ ಬರುತ್ತಿದೆ. ಎನ್ನನರಸಿ ಅರಸಿ ಹಿಡಿದು ಕೊಲುತ್ತಿದೆಯಯ್ಯ. ಅದು ನನ್ನನ್ನು ಹುಡುಕಿ ಹುಡುಕಿ ಕೊಂಡು ಬಂದು ಹಿಡಿದು ಕೊಲ್ಲುತ್ತಿದೆ. ನಾನಿನ್ನ ಮೊರೆಹೊಕ್ಕೆ ಈ. ಕಾಯಯ್ಯ. ಎನ್ನ ಬಿನ್ನಪವನವಧಾರು ಚೆನ್ನಮಲ್ಲಿಕಾರ್ಜುನಾ. ಚೆನ್ನಮಲ್ಲಿಕಾರ್ಜುನ  ನಾನು ನಿನ್ನ ಮೊರೆಹೊಕ್ಕಿದ್ದೇನೆ ನನ್ನ ಪ್ರಾರ್ಥನೆಯನ್ನು ಕೇಳು. ಕಾಪಾಡು ಕಾಪಾಡು.ಇದು ಅವರ ಮೊರೆ. ಸಂಸಾರವನ್ನು ಶತ್ರು, ಸಮುದ್ರ, ಸರ್ಪ, ಕಾಡು ಎಂದು ವಿವಿಧರೀತಿಯಲ್ಲಿ ಚಿತ್ರಿಸಿದ್ದಾರೆ.ಸಂಸಾರವು ಅನುಭಾವ ಜೀವನಕ್ಕೆ ದೊಡ್ಡ ಅಡ್ಡಿ ಎಂದೇ ಸಹಜ

ಅಭಿಪ್ರಾಯವಾಗಿದೆ. ಸಂಸಾರವು ನಾನು ಎನ್ನುವುದನ್ನು ಹೆಚ್ಚಿಸುತ್ತ ಹೋಗುತ್ತದೆ. ಮತ್ತೆ ಮತ್ತೆ ಹುಟ್ಟುಸಾವು. ಇದರಿಂದ ಪಾರಾಗಲು ಅನುಭಾವ ಜೀವನ ಶ್ರೇಷ್ಠ ಎಂದು ಸಾಧನೆಗೆ ದುಮುಕಿದರು ಪರಮಾತ್ಮನನ್ನು ತಂದೆ ಎಂದು ಸಂಭೋಧಿಸಿದ್ದಾರೆ. ಚೆನ್ನಮಲ್ಲಿಕಾರ್ಜುನ ನನ್ನ ಗಂಡ, ಲಗ್ನ ಮಾಡಿ ಕೊಳ್ಳುತ್ತೇನೆ.ಎಂದು ಬಂದ ಅಕ್ಕನವರು ತಂದೆ ಎಂದು ಕರೆದುದು,ಅನುಭಾವ ಸಾಧನೆ ಮುಂದುವರಿದುದನ್ನು ಹೇಳುತ್ತದೆ. ದು:ಖದ ಕಾರಣಗಳೇನು? ಹುಟ್ಟು ಸಾವು, ಜನ್ಮಾಂತರಗಳುಇವೆಯೆ?ಸುಖ, ದು:ಖ,ಮುಕ್ತಿ ಎಂದರೇನು? ದೇವರು ಎಂದರೇನು?ಇವೆಲ್ಲ ವಿಚಾರಗಳು ಅವರಿಗೆ ತಿಳಿಯತೊಡಗಿದವು.